ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ವಿಜಯನಗರ

## ನಾಗರಿಕ ಪ್ರಣಾಳಿಕೆ

Mobility & Infrastructure | Waste management | Health | Water & Sanitation | Women & Child | Environment

ಏಪ್ರಿಲ್ 2018

## ವಿಜಯನಗರದ ಒಳನೋಟ

1. ಪ್ರದೇಶ: 8.4 sq. km

2. ಜನಸಂಖ್ಯೆ : 305725

3. ವಾರ್ಡ್ : ಕೆಂಪಾಪುರ ಅಗ್ರಹಾರ, ವಿಜಯನಗರ, ಹೊಸಹಳ್ಳಿ, ಅತ್ತಿಗುಪ್ಪೆ, ಹಂಪಿನಗರ, ಬಾಪೂಜಿನಗರ, ಗಾಳಿ ಆಂಜನೇಯ ದೇವಸ್ಥಾನ ದೀಪಾಂಜಲಿ ನಗರ

4. ಒಟ್ಟು ಗೃಹಗಳು : 79085

5. ರಸ್ತೆ ವಿಸ್ತೀರ್ಣ : 267 km

6) ಕೆರೆಗಳು : ದೀಪಾಂಜಲಿ ಕೆರೆ

7) ಆರಕ್ಷಕ ಠಾಣೆ : ಬ್ಯಾಟರಾಯನಪುರ.

8) ಬಸ್ ನಿಲ್ದಾಣಗಳು : 75

9) ಅಗ್ನಿಶಾಮಕ ಕೇಂದ್ರ :0

10) ಸರ್ಕಾರಿ ಶಾಲೆಗಳು :24

11. ಆಟದ ಮೈದಾನ :13

## ಸರಳವಾಗಿ ನಾವು ಕೇಳುವುದಿಷ್ಟೆ

1)ನಾಗರೀಕರು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವಂತೆ ನಾಗರಿಕ ಸಂಸ್ಥೆಗಳು ಮಹಾನಗರಪಾಲಿಕೆ ಸದಸ್ಯರು ಮತ್ತು ನಾಗರಿಕ ಗುಂಪುಗಳೊಂದಿಗೆ ಶಾಸಕರು ಮಾಸಿಕ ಸಾಮಾನ್ಯ ಸಭೆ ನೆಡಸಬೇಕು.

2)ಕ್ಷೇತ್ರದ ಅಭಿವೃದ್ಧಿಗಾಗಿ ತೆಗೆದುಕೊಂಡು ಕ್ರಮಗಳು ಮತ್ತು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ ಒಳಗೊಂಡಂತೆ ನಾಗರಿಕ ಬೇಡಿಕೆಗಳಗೆ ಸಂಬಂಧಿಸಿದಂತೆ ನಾಗರಿಕಿರಗೆ ಸೂಕ್ತ ಮಾಹಿತಿಯನ್ನು ಒದಗಿಸಲು ಕ್ಷೇತ್ರದ ವೆಬ್ಸೈಟ್ ವಿನ್ಯಾಸಗೊಳಿಸಬೇಕು.

3)ಚಾಲ್ತಿಯಲಿರುವ ಹಾಗೂ ಮುಂದೆ ಕೈಗೊಳ್ಳ ಬಹುದಾದ ಕಾಮಗರಿಗಳ ಬಗ್ಗೆ ಪಾರದಾರ್ಶಕ ರೀತಿಯಲ್ಲಿ ಸಾರ್ವಜನಿಕರಿಕರೊಂದಿಗೆ ಸಮಾಲೋಚಿಸಲು ಆನ್ ಲೈನ್ ಹಾಗು ಆಫ್ ಲೈನ್ ಮೂಲಕ ಸಂಪರ್ಕ ಹೊಂದಬೇಕು.

4)ವಿಧಾನಸಭೆಯಲ್ಲಿ ಮಂಡಿಸಲಾಗುವ ವಿವಿಧ ನೀತಿ ವಿಷಯಗಳ ಬಗ್ಗೆ ಶಾಸಕರು ತಮ್ಮ ನಿಲುವನ್ನು ವ್ಯಕ್ತಗೊಳಿಸಬೇಕು. ಸಮಸ್ಯಗಳನ್ನು ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ನಾಗರಿಕರೊಂದಿಗೆ ಸಮಾಲೋಚಿಸಬೇಕು,

5)ಕ್ಷೇತ್ರದಲ್ಲಿ ಎದುರಾಗುವ ವಿವಿಧ ವಿಷಯಗಳಲ್ಲಿ ಭಾಗವಹಿಸಲು ನಾಗರಿಕರಿಗೆ ಸ್ವಯಂಪ್ರೇರಿತ ಅವಕಾಶಗಳನ್ನು ಕಲ್ಪಿಸಬೇಕು

6) ಕ್ಷೇತ್ರದ ಅಭಿವೃದ್ಧಿಗೆ ಸಂಭಂದಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶವಿರಬೇಕು ಮತ್ತು ಗೃಹಿಣಿಯರು ಮತ್ತು ಹಿರಿಯ ನಾಗರಿಕರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶಗಳನ್ನು ಕಲ್ಪಿಸಬೇಕು.

7)ಸಂಬಂಧಿತ ಅಧಿಕಾರಿಗಳ ಸಂಪರ್ಕ ವಿವರಗಳು (ಬಿ.ಬಿ.ಎಂ.ಪಿ) ಬೆಸ್ಕಾಂ) ಇತ್ಯಾದಿ ಮತ್ತು ದೂರುಗಳ ಪರಿಹಾರಕ್ಕಾಗಿ ನಿಗದಿಪಡಿಸಲಾಗುವ ಸಮಯದ ವಿವರಗಳನ್ನು ವಾರ್ಡ್ ಕಛೇರಿಯಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

8) ಎಲ್ಲಾ ನಾಗರಿಕ ಸಂಸ್ಥೆಗಳ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಬೇಕು

9) ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಗತಿಯ ತ್ರೈಮಾಸಿಕ ವರದಿ ನಾಗರಿಕರಿಗೆ ಲಭ್ಯವಾಗಬೇಕು

10) ಮೂಲೆ ನಿವೇಶನಗಳು ಹಾಗು ಇತರ ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕ್ಷೇತ್ರದ ನಕ್ಷೆ ಲಭ್ಯವಾಗುವಂತೆ ಏರ್ಪಾಡು ಮಾಡಬೇಕು

## ವಿಜಯನಗರ

**ಪ್ರಮುಖ 5 ಬೇಡಿಕೆಗಳು:**

### ತ್ಯಾಜ್ಯ ನಿರ್ವಹಣೆ

1. ಒಣ ಹಾಗೂ ಹಸಿ ಕಸಕ್ಕೆ ಪ್ರತ್ಯೇಕ ವಾಹನಗಳನ್ನು ಹೊಂದಿರುವಂತೆ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ಸಂಗ್ರಹಣೆ. ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್ ಅಳವಡಿಸಿರಬೇಕು.

2. ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ವರ್ಗಾಯಿಸಲು ಅನುಕೂಲವಾಗುವಂತೆ ವೈಜ್ಞಾನಿಕ ವರ್ಗ ಸ್ಥಳಗಳ ಸ್ಥಾಪನೆ. ಇದು ಬಾಪೂಜಿನಗರದ ಕೃಷ್ಣದೇವರಾಯ ರೈಲ್ವೇ ಅಂಡರ್‌ಪಾಸ್‌ನಲ್ಲಿರುವ ಕಪ್ಪುಕಲೆಗಳನ್ನು ತಡೆಯಲು ಸಹಾಯವಾಗುತ್ತದೆ.

3. ವಿಜಯನಗರದಾದ್ಯಂತ ಕಣ್ಣಿಗೆ ಗೋಚರಿಸುವಂತಹ ಸ್ವಚ್ಛತೆಯನ್ನು ಆದ್ಯತೆಯಾಗಿಸಿಕೊಳ್ಳಬೇಕು. ಎಲ್ಲಾ ಗಲೀಜು ಪ್ರದೇಶಗಳನ್ನು ಸುಂದರಗೊಳಿಸಲು ಮತ್ತು ನಿಗಾ ವಹಿಸಲು ಕ್ರಮಗಳನ್ನು ಕೈಗೊಳ್ಳಬೇಕು.

4. ಎಲ್ಲಾ ವಾರ್ಡ್‌ಗಳೂ ಅತ್ಯಾಧುನಿಕ ಒಣಕಸ ಸಂಗ್ರಹಣಾ ಕೇಂದ್ರಗಳನ್ನು ಹೊಂದಿರಬೇಕು ಮತ್ತು ಎಲ್ಲಿ ಕಸ ಉತ್ಪಾದನೆಯಾಗುತ್ತದೋ ಅದೇ ವಾರ್ಡ್‌ನಲ್ಲೇ ಸಂಸ್ಕರಿಸಲು ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿರಬೇಕು.

5. ದೇವಸ್ಥಾನಗಳು, ಶಿಕ್ಷಣ ಸಂಸ್ಥೆಗಳು, ರೆಸ್ಟೋರೆಂಟ್‌ಗಳು, ಆಸ್ಪತ್ರೆಗಳು ಮತ್ತು ಇತರೆ ಬೃಹತ್ ಪ್ರಮಾಣದಲ್ಲಿ ಕಸ ಉತ್ಪಾದಿಸುವವರನ್ನು ಶೂನ್ಯ ಕಸದ ಮೂಲವಾಗುವುದಕ್ಕೆ ಉತ್ತೇಜನ ಮತ್ತು ಬೆಂಬಲಿಸಬೇಕು.

### ಸಂಚಾರ ಮತ್ತು ಸಾರಿಗೆ

1. ಪಾರ್ಕಿಂಗ್ ಸೌಲಭ್ಯ ಮತ್ತು ಬಸ್‌ಸ್ಟ್ಯಾಂಡ್ ಹಾಗೂ ಮೆಟ್ರೋ ಸ್ಟೇಷನ್‌ನಿಂದ ಕೊನೆಯ ಹಂತದವರೆಗೆ ಸಂಪರ್ಕ ವ್ಯವಸ್ಥೆ ಮಾಡಬೇಕು

2. ವಿಜಯನಗರದಾದ್ಯಂತ ಪಾದಚಾರಿ ಸ್ನೇಹಿ ಮತ್ತು ಪ್ರವೇಶಿಸಬಹುದಾದಂತಹ ಪಾದಚಾರಿ ಮಾರ್ಗಗಳು

3. ರಸ್ತೆ ಕಾಮಗಾರಿ ಕೈಗೊಂಡ ವಿವರಗಳ ಮಾಹಿತಿಯನ್ನು ಪ್ರಸರಿಸುವುದು. ರಸ್ತೆ ನಿರ್ಮಾಣಕ್ಕೆ ಪಾರದರ್ಶಕ ಮತ್ತು ಜವಾಬ್ದಾರಿಯುತ ಪ್ರಕ್ರಿಯೆಯ ಅಳವಡಿಕೆ

4. ರಸ್ತೆ ವಿಭಜಕಗಳ ಎತ್ತರವನ್ನು ತಗ್ಗಿಸುವ ಮೂಲಕ ರಸ್ತೆ ದಾಟುವುದನ್ನು ಸುಲಭವಾಗಿಸುವುದು ಮತ್ತು ಪೆಲಿಕನ್ ದೀಪಗಳು ಮತ್ತು ಸ್ಕೈವಾಕ್‌ಗಳನ್ನು ದೊರಕಿಸುವುದು

5. ಉತ್ತಮ ಬಸ್ ಸೇವೆ ಮತ್ತು ಬಿಸಿಸಿ ಲೇಔಟ್‌ನಿಂದ ವಿಜಯನಗರ ಮುಖ್ಯರಸ್ತೆಗೆ ಫೀಡರ್ ಬಸ್ ಹಾಗೂ ಬಸವೇಶ್ವರನಗರ, ಚಂದ್ರ ಲೇಔಟ್‌ನಿಂದ ಮಾರುಕಟ್ಟೆ, ಕಾರ್ಪೊರೇಷನ್‌ಗೆ ನೇರ ಬಸ್‌ಗಳು

## ನೀರು

1. ನೀರು ಸರಬರಾಜು ಸಮಯವನ್ನು ನಾಗರೀಕರಿಗೆ ತಿಳಿಯುವಂತೆ ಮಾಡುವುದು

2. ಆರ್‌ಒ ಶುದ್ದೀಕರಣ ಘಟಕಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಖಾತ್ರಿಪಡಿಸುವುದು ಮತ್ತು ಈ ಘಟಕದಿಂದ ಬರುವ ನಿರುಪಯುಕ್ತ ನೀರನ್ನು ಬಳಸುವುದು

3. ಪ್ರವಾಹಕ್ಕೆ ತುತ್ತಾಗಬಲ್ಲ ಪ್ರದೇಶಗಳಲ್ಲಿ ಪ್ರವಾಹ ತಡೆಗಟ್ಟಲು ಯೋಜನೆ ಮತ್ತು ವಿಕೋಪ ನಿರ್ವಹಣೆ ಯೋಜನೆಗಳು ಅಗತ್ಯವಾಗಿದೆ.

4. ಎಲ್ಲಾ ಸಾರ್ವಜನಿಕ ಸ್ಥಳಗಳು ಮತ್ತು ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಅಳವಡಿಸಬೇಕು.

5. ಮಳೆ ನೀರು ಕಾಲುವೆ ಮತ್ತು ಮೋರಿಗಳಲ್ಲಿ ಕಾಲಕಾಲಕ್ಕೆ ಹೂಳು ಎತ್ತುವುದು ಮತ್ತು ನಿರ್ವಹಿಸುವುದು

## ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ

1. ಗುಣಮಟ್ಟದ ಶಿಕ್ಷಣ ಮತ್ತು ಮಕ್ಕಳ ಸರ್ವಾಂಗೀಣ ಬೆಳವಣಿಗೆಯ ಉಪಕ್ರಮವುಳ್ಳ ಮಾದರಿ ಸರ್ಕಾರಿ ಶಾಲೆಗಳು

2. ವಿಜಯನಗರದಲ್ಲಿ ಸರಗಳ್ಳತನವೇ ಪ್ರಮುಖ ಸುರಕ್ಷಾ ಸಮಸ್ಯೆಯಾಗಿದೆ. ಸಾರ್ವಜನಿಕ ಜಾಗಗಳನ್ನು ಸುರಕ್ಷಿತವಾಗಿರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರ ತೊಂದರೆಗಳನ್ನು ನಿವಾರಿಸಲು ಸಾರ್ವಜನಿಕ ಜಾಗಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ, ಪಾದಚಾರಿ ಮಾರ್ಗಗಳ ಲಭ್ಯತೆ, ಸಾಕಷ್ಟು ಪೊಲೀಸ್ ಗಸ್ತು ತಿರುಗುವಿಕೆ ಮತ್ತು ಸಿಸಿಟಿವಿಗಳ ವ್ಯವಸ್ಥೆಯಂತಹ ಕ್ರಮಗಳ ಜಾರಿ

3. ಅಳವಡಿಸಲಾದ ಸಿಸಿಟಿವಿ ನಿಗಾವಣೆಗೆ ಅಗತ್ಯ ಪ್ರಕ್ರಿಯೆಯನ್ನು ಸಿದ್ಧಗೊಳಿಸುವುದು.

4. ವಿವಿಧ ರೀತಿಯ ಆದಾಯ ಗುಂಪುಗಳಲ್ಲಿನ ಮಹಿಳೆಯರಿಗೆ ಸುರಕ್ಷತೆ ಮತ್ತು ಸಬಲೀಕರಣ ಸಂಪನ್ಮೂಲಗಳ ಕುರಿತು ಜಾಗೃತಿ ಬೆಳೆಸುವುದು

5. ವಿಜಯನಗರದಾದ್ಯಂತ ಪೊಲೀಸ್ ಚೌಕಿಗಳು ಮತ್ತು ನಿರಂತರ ಪೊಲೀಸ್ ಗಸ್ತು ತಿರುಗುವಿಕೆ

## ಪರಿಸರ ಮತ್ತು ಆರೋಗ್ಯ

1. ಹಸಿರು ಹೊದಿಕೆಯ ನಿಗಾವಣೆ ಮತ್ತು ನಿರ್ವಹಣೆ (ವೈಜ್ಞಾನಿಕ ರೀತ್ಯಾ ಮರ ಕತ್ತರಿಸುವಿಕೆ ಮತ್ತು ಸ್ಥಳಾಂತರ). ಇದರ ಅನುಷ್ಠಾನ ಮತ್ತು ನಿಗಾವಣೆಗಾಗಿ ಮರ ಸಮಿತಿಯ ರಚನೆ

2. ನಿರೋಧಕ ಆರೋಗ್ಯ ರಕ್ಷಣೆ ಕ್ರಮಗಳಿಗೆ ಆದ್ಯತೆ ನೀಡುವುದು

3. ವಿಜಯನಗದಲ್ಲಿ ಕೈಗೆಟುಕುವ ದರದಲ್ಲಿ ಆರೋಗ್ಯ ಸೌಲಭ್ಯ ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ರೋಗಪತ್ತೆ ಕೇಂದ್ರವೊಂದರ ಸ್ಥಾಪನೆ

4. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಪಾರ್ಕ್‌ಗಳಲ್ಲಿ ಶೌಚಾಲಯಗಳ ಲಭ್ಯತೆ

5. ವಾಯು ಗುಣಮಟ್ಟ ಮತ್ತು ಗದ್ದಲ ಪ್ರಮಾಣ ನಿಗಾವಣೆ ಸೂಚಕಗಳ ಅಳವಡಿಕೆ. ಶಾಲೆಗಳು ಮತ್ತು ಆಸ್ಪತ್ರೆಗಳ ಸುತ್ತಲೂ ಗದ್ದಲ ಪ್ರಮಾಣ ಇಳಿಕೆಗೆ ಉಪಕ್ರಮಗಳು